**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/03/ಇಸಿಎಸ್(1)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದಿ: 06.05.2024.

**ಜ್ಞಾಪನ**

ವಿಷಯ: 2023-24 ನೇ ಸಾಲಿನ ಡಿಪ್ಲೋಮಾ ಸೆಮಿಸ್ಟರ್ ಮೇ-2024 ರ ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳ ಪರಿವೀಕ್ಷಕರು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/03/ಇಸಿಎಸ್(1)/2024, ದಿನಾಂಕ: 04.04.2024.
2. ಈ ಕಛೇರಿ ಜ್ಞಾಪನ ಸಂಖ್ಯೆ: DTE-EXAM0ECS2/1/2024 JD-EXAM, ದಿನಾಂಕ: 01.03.2024.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಈ ಕಛೇರಿ ಜ್ಞಾಪನದಲ್ಲಿ 2023-24 ನೇ ಸಾಲಿನ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಆಂತರಿಕ ಅಂಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲು "ಆಂತರಿಕ ಅಂಕಗಳ ಪರಿವೀಕ್ಷಕರು"ಗಳನ್ನು ನೇಮಿಸಲಾಗಿದೆ ಮತ್ತು ಅವರು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಉಲ್ಲೇಖ (2) ರ ಈ ಕಛೇರಿ ಜ್ಞಾಪನದಲ್ಲಿ ಮೇ-2024 ರ ಸೆಮಿಸ್ಟರ್ ಪರೀಕ್ಷೆಯಲ್ಲಿ ಎಲ್ಲಾ ಥಿಯರಿ ವಿಷಯಗಳ ಪ್ರಶ್ನೆ ಪತ್ರಿಕೆಗಳನ್ನು ಆನ್‌ಲೈನ್‌ನಲ್ಲಿಯೇ ವಿತರಿಸುವ ಬಗ್ಗೆ ಮಾಹಿತಿ ನೀಡಲಾಗಿತ್ತು ಮತ್ತು ಮೇ-2024 ರ ಪರೀಕ್ಷೆಗೆ ಬೇಕಾಗಿರುವ IT Infrastructure ಗಳ ಪಟ್ಟಿಯನ್ನು ನೀಡಿ, ಅವುಗಳು ಲಭ್ಯವಿರುವಂತೆ ಕ್ರಮ ವಹಿಸಲು ಸೂಚಿಸಲಾಗಿತ್ತು.

| SL No | IT infrastructure | Nos |
|---|---|---|
| 1 | Desktop Computers (Windows 10 or above) with multimedia system for online video conference | As per needs |
| 2 | 05 KVA online UPS | 01 |
| 3 | Fastest heavy duty laserjet Printers (Duplex + network) | As per needs |
| 4 | Internet Connection (wired/wireless/mobile) | As per needs |
| 5 | Web Cameras with Mic for online video conference | As per needs |
| 6 | CCTV Cameras for whole exam centre and in strong room | As per needs |

ಪ್ರಯುಕ್ತ ಆಂತರಿಕ ಅಂಕಗಳ ಪರಿವೀಕ್ಷಕರುಗಳು ತಮಗೆ ನಿಯೋಜಿಸಲಾಗಿರುವ ಸಂಸ್ಥೆಯಲ್ಲಿ IT Infrastructure ಗಳ ಬಗ್ಗೆ ಮಾಡಿರುವ ವ್ಯವಸ್ಥೆಗಳನ್ನು ಮತ್ತು ಪ್ರಶ್ನೆ ಪತ್ರಿಕೆಗಳ ಭದ್ರತೆ ಮತ್ತು ಗೌಪ್ಯತೆ ಕಾಪಾಡಲು ತೆಗೆದುಕೊಂಡಿರುವ ಕ್ರಮಗಳನ್ನು ವಿವರವಾಗಿ ಪರಿಶೀಲಿಸಿ ವರದಿ ನೀಡುವಂತೆ ತಿಳಿಸಲಾಗಿದೆ. ಸದರಿ ವ್ಯವಸ್ಥೆಯಲ್ಲಿ ಯಾವುದೇ ಲೋಪದೋಷ ಅಥವಾ ನ್ಯೂನ್ಯತೆ ಕಂಡು ಬಂದಲ್ಲಿ ಕೂಡಲೇ ಕಾರ್ಯದರ್ಶಿಯವರ ಗಮನಕ್ಕೆ ತರುವಂತೆ ತಿಳಿಸಲಾಗಿದೆ. btejdexam@gmail.com ಗೆ ವರದಿ ಕಳುಹಿಸಿ

ಮುಂದುವರೆದು, ಆಂತರಿಕ ಅಂಕಗಳ ಪರಿಶೀಲನೆ ಸಮಯದಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ವಿವರವಾಗಿ ಪರಿಶೀಲಿಸುವಂತೆ ಸೂಚಿಸಲಾಗಿದೆ.

1. ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/03/ಇಸಿಎಸ್(1)/2024, ದಿನಾಂಕ: 04.04.2024 ರನ್ವಯ ಆಂತರಿಕ ಅಂಕಗಳ ಪರಿವೀಕ್ಷಕರು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಮೂಲ ಆಂತರಿಕ ಅಂಕಗಳ ವಹಿಯಲ್ಲಿ ಮೇ-2024 ರ ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಪರಿಶೀಲಿಸಿ ಎಲ್ಲಾ ಪುಟಗಳಲ್ಲಿಯೂ ಪೂರ್ಣ ಸಹಿ ಮಾಡಿ

ಸೆಮಿಸ್ಟರ್‌ವಾರು ಕೊನೆಯ ಪುಟದಲ್ಲಿ ಜ್ಞಾಪನದಲ್ಲಿ ತಿಳಿಸಿರುವಂತೆ ದೃಢೀಕರಿಸುವುದು. ನಂತರ ಈಗಾಗಲೇ ಸಂಸ್ಥೆಗಳಲ್ಲಿ ಆಂತರಿಕ ಅಂಕಗಳನ್ನು HOD/PPL login ನಲ್ಲಿ ಬಿಟಿಇ ಲಿಂಕ್ಸ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಿದ್ದಲ್ಲಿ, ಬಿಟಿಇ ಲಿಂಕ್ಸ್ ಪೋರ್ಟಲ್ ನಿಂದ ಒಂದು ಪ್ರತಿಯನ್ನು download ಮಾಡಿ ಮೂಲ ಆಂತರಿಕ ವಹಿಯಂತೆ ಪರಿಶೀಲಿಸತಕ್ಕದ್ದು.

ಈಗಾಗಲೇ ಅಪ್‌ಲೋಡ್ ಮಾಡಿರುವ ಆಂತರಿಕ ಅಂಕಗಳು ಮತ್ತು ಆಂತರಿಕ ಅಂಕಗಳ ವಹಿಯಲ್ಲಿನ ದೃಢೀಕೃತ ಅಂಕಗಳಿಗೂ ವ್ಯತ್ಯಾಸವಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸುವುದು.

2. ವಿದ್ಯಾರ್ಥಿಯು ಮೇ-2024 ರ ಪರೀಕ್ಷೆಗೆ ಪರೀಕ್ಷಾ ಶುಲ್ಕ ಪಾವತಿಸಿರುವ ಬಗ್ಗೆ – ವಿದ್ಯಾರ್ಥಿಗಳು ಮೇ-2024 ರ ಪರೀಕ್ಷೆಯಲ್ಲಿ 2, 4 ಮತ್ತು 6 ನೇ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ (ಎಲ್ಲಾ ವಿಷಯಗಳ) ಹಾಜರಾಗುತ್ತಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಡಿಸೆಂಬರ್-2023 ರ ಸೆಮಿಸ್ಟರ್ ಪರೀಕ್ಷೆಯಲ್ಲಿ 1, 3 ಮತ್ತು 5 ನೇ ಸೆಮಿಸ್ಟರ್ ಪೂರ್ಣ ವಿಷಯಗಳ ಪರೀಕ್ಷೆಗಳಿಗೆ ಶುಲ್ಕ ಪಾವತಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ವಿದ್ಯಾರ್ಥಿಗಳು ಶುಲ್ಕ ಪಾವತಿಸದೇ ಇದ್ದ ಪಕ್ಷದಲ್ಲಿ ಮೇ-2024 ರ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಅವಕಾಶವಿರುವುದಿಲ್ಲ ಎಂದು ತಿಳಿಸಲಾಗಿದೆ.
3. ವಿದ್ಯಾರ್ಥಿಯ Attendance shortage ಬಗ್ಗೆ – 2, 4 ಮತ್ತು 6 ನೇ ಸೆಮಿಸ್ಟರ್ ಪೂರ್ಣ ವಿಷಯಗಳ ಪರೀಕ್ಷೆಗೆ ಹಾಜರಾಗುತ್ತಿದ್ದಲ್ಲಿ, ವಿದ್ಯಾರ್ಥಿಗಳ ಹಾಜರಾತಿಯನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು. ಹಾಜರಾತಿ ಕಡಿಮೆ ಇರುವಂತಹ ವಿದ್ಯಾರ್ಥಿಗಳು ಮೇ-2024 ರ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಅವಕಾಶವಿರುವುದಿಲ್ಲ ಎಂದು ತಿಳಿಸಲಾಗಿದೆ.
4. Repeater ಪ್ರವೇಶಗಳ ಬಗ್ಗೆ – attendance shortage ಇರುವ ವಿದ್ಯಾರ್ಥಿಗಳಿಗೆ ಮಾತ್ರ ಸಿ-20 ರೆಗ್ಯೂಲೇಷನ್ ಅನುಸಾರ repeater ಪ್ರವೇಶ ನೀಡಿರುವುದನ್ನು ಖಾತರಿ ಪಡಿಸಿಕೊಳ್ಳುವುದು.
5. ವಿದ್ಯಾರ್ಥಿಗಳ Mal Practice ಪ್ರಕರಣಗಳ ಬಗ್ಗೆ ಮತ್ತು ಸಂಸ್ಥೆಗಳಲ್ಲಿ Mal Practice ಪ್ರಕರಣಗಳ register ನಿರ್ವಹಣೆ ಮಾಡುತ್ತಿರುವ ಬಗ್ಗೆ – ಡಿಸೆಂಬರ್-2023 ರ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು 1, 3 ಮತ್ತು 5 ನೇ ಸೆಮಿಸ್ಟರ್ ಪೂರ್ಣ ವಿಷಯಗಳ ಪರೀಕ್ಷೆಗೆ ಹಾಜರಾಗಿ Mal Practice ಪ್ರಕರಣಕ್ಕೆ ಒಳಗಾಗಿ PEC (Performance of Exam Cancelled) ಎಂದು ಶಿಕ್ಷೆ ವಿಧಿಸಿದಲ್ಲಿ, ಮುಂದಿನ Higher Semester ಗೆ ಪ್ರವೇಶ ಪಡೆಯಲು ಅರ್ಹರಿರುವುದಿಲ್ಲ. ಆದಕಾರಣ ಇಂತಹ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಕುರಿತು ಕ್ರಮ ವಹಿಸಲು ಮತ್ತು ಈ ವಿಷಯದಲ್ಲಿ ಯಾವುದೇ ಗೊಂದಲ ಅಥವಾ ಲೋಪದೋಷ ಉಂಟಾಗದಂತೆ ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿದೆ.

**ಕಾರ್ಯದರ್ಶಿ**
**ತಾಂತ್ರಿಕ ಪರೀಕ್ಷಾ ಮಂಡಳಿ**

ಇವರಿಗೆ:

1. ಮೇ-2024 ಪರೀಕ್ಷೆಯಲ್ಲಿ ನಿಯೋಜಿಸಲಾಗಿರುವ ಎಲ್ಲಾ ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ – ಮುಂದಿನ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ – ಮಾಹಿತಿಗಾಗಿ.

ಪ್ರತಿ:

1. ಶ್ರೀ ಹರೀಶ ಶೆಟ್ಟಿ, ಪ್ರಾಂಶುಪಾಲರು, ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು – ಮಾಹಿತಿಗಾಗಿ.
2. ಇ-ಆಡಳಿತ ವಿಭಾಗ – ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.